



**Crustaceans)** ಕೊಕ್ಕಿನಿಂದ ಕಚ್ಚಿಕೊಂಡು ಮೇಲೆ ಹಾರುತ್ತಾ  ಕಲ್ಲಿನ ಬಂಡೆಯ ಮೇಲೆ ಎಸೆದು, ಅದು ಒಡೆದಾಗ ಒಳಗಿನ ಮಾಂಸವನ್ನು ತಿನ್ನುವಂತಹ ಬುದ್ಧಿವಂತ ಕಾಗೆಯಿದು.

ಈ ಕಡಲಕಾಗೆ ಹಿಮಾಲಯದ ಅತಿ ಎತ್ತರದ ಪ್ರದೇಶಗಳಾದ ಮಾನಸ ಸರೋವರ, ಲಡಾಕ್, ಮತ್ತು ಟಿಬೆಟ್‌ನಲ್ಲಿ ಜೂನ್ ತಿಂಗಳಿಂದ ಆಗಸ್ಟ್ ತಿಂಗಳವರೆಗೂ ತನ್ನ ವಂಶಾಭಿವೃದ್ಧಿಯ ಕಾರ್ಯದಲ್ಲಿ ನಿರತವಾಗುತ್ತದೆ. ಜೊಂಡಿನಿಂದ ಗೂಡನ್ನು ನಿರ್ಮಿಸಿ , ಎರಡು– ಮೂರು ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗೆ ಕಾವು ಕೊಡುವುದರಿಂದ ಹಿಡಿದು ಮರಿಗಳ ಲಾಲನೆ ಪಾಲನೆಯಲ್ಲಿ ಗಂಡು ಮತ್ತು ಹೆಣ್ಣು ಸಮಾನವಾಗಿ ತೊಡಗಿಸಿಕೊಳ್ಳುತ್ತವೆ. ಆದರೆ ಇದು ಜಗಳಗಂಟ ಪಕ್ಷಿ.  ಕ್ರರ್ರ.. ಕ್ರರ್ರ.. ಕ್ರೀ...ಇ...ಇ ಎಂಬ ಕರ್ಕಶ ಕೂಗು ಬೇರೆ. ಈ ಕರ್ಕಶ ಶಬ್ದದ ಗುಣದಿಂದಾಗಿಯೇ ಇದನ್ನು 'ಖರ್ಶಬ್ದ ಕೂರಾರ್' ಮತ್ತು 'ಡಾಮರ್' ಎಂದು ಸಂಸ್ಕೃತದಲ್ಲಿ ಗುರುತಿಸುತ್ತಾರೆ.

ಸಾಲ್ಟ್ ಲೇಕ್ ಸಿಟಿಯಲ್ಲಿ ಈ ಹಕ್ಕಿಗಳು ರೈತ ಮಿತ್ರ. ಆ ಪ್ರದೇಶದಲ್ಲಿ ಬೆಳೆಗಳಿಗೆ ಹಾನಿಕಾರಕ ಕೀಟಗಳಾದ ಮಿಡತೆಗಳು ಕೋಟಿಗಟ್ಟಲೆ ಸಂಖೆಯಲ್ಲಿ ಬಂದು  ದಾಳಿ ನಡೆಸಿದಾಗ, ಅಪದ್ಬಾಂಧವನಂತೆ ಬಂದು ಆ ಎಲ್ಲಾ ಕೀಟಗಳನ್ನು ಮುಕ್ಕಿ ಸ್ವಲ್ಪ ಮಟ್ಟಿಗಾದರೂ ಬೆಳೆಯನ್ನು ಉಳಿಯುವಂತೆ ಮಾಡುವುದಿದೆ. ಜೈವಿಕ ಕೀಟನಾಶಕವಾಗಿ ಇವು ಕಾರ್ಯ ನಿರ್ವಹಿಸಿದ್ದಕ್ಕೆ ಕೃತಜ್ಞತೆ ಎಂಬಂತೆ ಈ ಹಕ್ಕಿಯ ಬೃಹತ್ ಪ್ರತಿಮೆಯನ್ನು ಸಾಲ್ಟ್ ಲೇಕ್ ಸಿಟಿಯಲ್ಲಿ ನಿರ್ಮಿಸಿದ್ದಾರೆ.

ತೆಳ್ಳಗೆ ಬಳುಕುತ್ತಾ ಕ್ಯಾಟ್ ವಾಕ್ ಮಾಡುವ ಲಲನೆಯರು, ಅದರಲ್ಲೂ ಅಂತರರಾಷ್ಟ್ರೀಯ ಸೌಂದರ್ಯ ಸ್ಪರ್ಧೆಯಲ್ಲಿ ಸ್ಪರ್ಧಿಸುವವರು ತಮಗೂ ಇಂತಹ ರೆಕ್ಕೆ ಇದ್ದಿದ್ದರೆ ಎಷ್ಟು ಚೆನ್ನ ಎಂದು ಕನಸುವಂತೆ, 'ಕ್ಯಾಟ್ ವಾಕ್' ಮಾಡುತ್ತಾ ಇದನ್ನು ಅನುಕರಿಸುವುದು ವಾಡಿಕೆ. ಮರಾಠಿಯಲ್ಲಿ ವೀಚಿ ಕಾಕಾ ಅಂದರೆ ಸಮುದ್ರ ಅಲೆಗಳ ಕಾಗೆ ಎಂದು ಕರೆಯುತ್ತಾರೆ. ಇದು  **laridae** ವರ್ಗಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಲಾರೂಸ್ ಬ್ರನ್ನಿಸೆಫಾಲೂಸ್ **(larus brunnicephalus)** ಎಂದು ದಾಖಲಾಗಿದೆ.

'ಮೊದಲ ನೋಟದಲ್ಲೇ ಪ್ರೀತಿ' ಎಂಬ  ಹೆಗ್ಗಳಿಕೆ ಇದಕ್ಕೆ ಸಲ್ಲದು. ಕಾರಣ ಗಂಡು– ಹೆಣ್ಣು ಮೊದಲ ಭೇಟಿಯಲ್ಲಿ ಒಂದನ್ನೊಂದು ಬೆದರಿಸಿ ಓಡಿಸುವಂತೆ ಅರಚುತ್ತವೆ. ನಂತರ ನಿಧಾನವಾಗಿ ವಿರುದ್ಧ ದಿಕ್ಕಿಗೆ ಮುಖ ಮಾಡುತ್ತಾ ನಿಲ್ಲುತ್ತವೆ. ವಿರುದ್ಧ  ದಿಕ್ಕಿಗೆ ತಿರುಗಿದ, ಭಂಗಿಯಲ್ಲೇ ಒಂದಕ್ಕೊಂದು  ಪಕ್ಕಕ್ಕೆ ಸರಿಯುತ್ತಾ ಹತ್ತಿರವಾಗುತ್ತಾ, ತಮ್ಮ ತಪ್ಪಿನ ಅರಿವಾಗಿ ಪ್ರಾಯಶ್ಚಿತ್ತವೆಂಬಂತೆ ಜೊತೆಗೂಡುತ್ತವೆ. ಇದರ ಪ್ರಣಯ ಕ್ರಿಯೆ ಅತ್ಯಾಶ್ಚರ್ಯವನ್ನುಂಟು ಮಾಡುವಂಥದು.

ಈ ಪಕ್ಷಿಗಳಲ್ಲಿ ನಡೆಯುವ ಪ್ರಣಯದ ವಿಧಿ ವಿಧಾನಗಳ ರಂಗಸ್ಥಳ ಅತಿ ಎತ್ತರದ ಹಿಮಾಲಯ. ಋತುಮಾನಕ್ಕೆ ಅನುಗುಣವಾಗಿ ಸರಿಸುಮಾರು ಜೂನ್ ತಿಂಗಳಲ್ಲಿ ಪ್ರಣಯ ಲೋಕದ ರಂಗಸ್ಥಳ ಸಜ್ಜಾಗುವುದು.

ಮೊದಲ ನೋಟದಲ್ಲಿ ಆರ್ಭಟಿಸುವ ಗಂಡು, ಈ ಅವಧಿಯಲ್ಲಿ ನಮ್ರತೆಯ ಭಾವವನ್ನು ತೋರುತ್ತಾ ಹೆಣ್ಣಿಗೆ ಶರಣಾಗುತ್ತದೆ. ಗಂಡು ಆಹಾರದ ತುಣುಕನ್ನು ಹೆಣ್ಣಿಗೆ ನೀಡಿ, ಮುದ್ದು ಮಾಡಿ ಪ್ರಣಯಭಿಕ್ಷೆಗಾಗಿ ಅಂಗಲಾಚುತ್ತದೆ. ಗಂಡಿನ ವಿನಮ್ರತೆ, ವಿನಯ, ಹೆಣ್ಣಿನ ಒಲವು ಒಂದುಗೂಡಿ ಒಂದು ಸುರಕ್ಷಿತ ಸ್ಥಳದಲ್ಲಿ ಜೊಂಡಿನಿಂದ ಗೂಡು ನಿರ್ಮಿಸಿ ಮೊಟ್ಟೆಯನ್ನಿಡುತ್ತವೆ. ಜೋಡಿಯಾಗಿಯೇ ಮೊಟ್ಟೆ ಮರಿಗಳ ಸಂರಕ್ಷಣೆ ಭಾರವನ್ನು ಹೊರುತ್ತವೆ.